# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 480/2023**

ಆರೋಪಿಯ ಹೆಸರುಃ ಶ್ರೀಮತಿ ಗೀತಾ ಪ್ರಕಾಶ ರಾಯ್ಕರ
ವಯಸ್ಸುಃ 45 ವರ್ಷ
ಉದ್ಯೋಗಃ ಟೇಲರ್
ವಿಳಾಸಃ ಸಾಃ ಲಕ್ಷ್ಮೇಶ್ವರ, ತಾಃ ಅಂಕೋಲಾ

## ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿಯ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಫಿರ್ಯಾದಿ ಜಯಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಕೋ- ಆಪರೇಟಿವ್ ಸೊಸೈಟಿ ಲಿಮಿಟೆಡ್ , ಗೋಕರ್ಣ, ಶಾಖೆ ಅಂಕೋಲಾ, ಇದರ ಸಾಲ ವಸೂಲಾತಿ ಅಧಿಕಾರಿ ಪಿಡಬ್ಲ್ಯೂ 1- ನಂದೀಶ ಹೊಸಬಣ್ಣ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿತಳು ಫಿರ್ಯಾದಿ ಸಂಸ್ಥೆಯಿಂದ ದಿನಾಂಕಃ 05-03-2022 ರಂದು ರೂ. 41,000/- ಸಾಲವನ್ನು ಬಟ್ಟೆ ವ್ಯಾಪಾರದ ಸಲುವಾಗಿ ಪಡೆದಿದ್ದು, ಆರೋಪಿತಳು ವ ಆಕೆಯ ಜಾಮಿನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತಳ ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.49,570/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 09-03-2023 ರಂದು ತಾನು ಕರ್ನಾಟಕ ಬ್ಯಾಂಕ್ ಲಿಮಿಟೆಡ್ , ಶಾಖೆಃ ಬೊಬ್ರುವಾಡ , ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 265895 ನ್ನು ರೂ.49,570/- ಕ್ಕೆ ನೀಡಿರುತ್ತಾಳೆ. ಸದರಿ ಆರೋಪಿತಳು

ನೀಡಿದ ಚೆಕ್ಕು ಖಾತೆಯಲ್ಲಿ "**Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀಯಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀಯಾ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 06/12/2024.

**( ಅರ್ಪಿತಾ ಬಿ. ಬೆಲ್ಲದ)**
**ಪ್ರಭಾರ ಪ್ರ ದ ನ್ಯಾದಂ, ಅಂಕೋಲಾ.**